**ಆಕಾಶವಾಣಿ** **10.01.2025**

**ಪ್ರದೇಶ ಸಮಾಚಾರ** **ಮಧ್ಯಾಹ್ನ 12 ಗಂಟೆಗೆ**

**ಓದುತ್ತಿರುವವರು ಆರತಿ ದೇವಶಿಖಾಮಣಿ** **ಬುಧವಾರ**

**ಜ್ಞಾನ ದಾಸೋಹಿ, ದಾನವೀರ, ಸಿರಸಂಗಿ** ಲಿಂಗರಾಜ ಸರದೇಸಾಯಿ ಅವರ 164 ನೇ ಜಯಂತಿ ಇಂದು. 19ನೇ ಶತಮಾನದ ಯುಗ ಪುರುಷ ಎನಿಸಿ, ಸಮಾಜವನ್ನು ಎಚ್ಚರಿಸಿ, ಶಿಕ್ಷಣದ ಜ್ಯೋತಿ ಹಚ್ಚಿದ, ಲಿಂಗರಾಜರು ತಮ್ಮ ಸಂಸ್ಥಾನದ ಸಮಸ್ತ ಆಸ್ತಿಯನ್ನು ಜನ ಕಲ್ಯಾಣಕ್ಕಾಗಿ ದಾನ ಮಾಡಿ, ಮನುಕುಲದ ಸೇವೆಗೆ ನಿದರ್ಶನರಾದವರು ಎಂದು ಕೈಗಾರಿಕೆ ಖಾತೆ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ. ಎಕ್ಸ್ ಮಾಧ್ಯಮದಲ್ಲಿ ಈ ವಿಷಯ ಪ್ರಕಟಿಸಿ, ರಾಜ್ಯಾದ್ಯಂತ ಶಾಲೆ, ಕಾಲೇಜುಗಳು ಮತ್ತು ಅನ್ನದಾಸೋಹ ಕೇಂದ್ರಗಳ ಸ್ಥಾಪನೆಗೆ ಲಿಂಗರಾಜರು ಕಾರಣಕರ್ತರಾದರು. ವೈಜ್ಞಾನಿಕ ಕೃಷಿ ಹಾಗೂ ಜಲ ಸಂಪತ್ತಿನ ಅಭಿವೃದ್ಧಿಗೆ ಕೆರೆ, ಕಟ್ಟೆ ಹಾಗೂ ಕಾಲುವೆ ನಿರ್ಮಿಸಿ, ಮಾದರಿಯಾದರು. ಸಮಾಜ ಸುಧಾರಕರಾಗಿದ್ದ ಅವರು, ಬಾಲ್ಯವಿವಾಹ ಮತ್ತು ವರದಕ್ಷಿಣೆ ಪದ್ಧತಿಗಳ ವಿರುದ್ಧ ಧ್ವನಿ ಎತ್ತಿ, ಜಾಗೃತಿ ಮೂಡಿಸಿದರು ಎಂದಿದ್ದಾರೆ.

**<><><>**

**ಇಂದು, ವೈಕುಂಠ ಏಕಾದಶಿ.** ತನ್ನಿಮಿತ್ತ ನಾಡಿನ ವಿವಿಧ ದೇವಾಲಯಗಳಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ಹಾಗೂ ವಿಧಿ ವಿಧಾನಗಳು ಜರುಗಿದವು. ವಿಶೇಷ ಅಲಂಕಾರ ಗಮನ ಸೆಳೆಯುವಂತಿತ್ತು. ನಾಡಿನ ಜನತೆಗೆ ಗಣ್ಯರು ವೈಕುಂಠ ಏಕಾದಶಿಯ ಶುಭಾಶಯ ಕೋರಿದ್ದು, ಎಲ್ಲರ ಬದುಕಿನಲ್ಲಿ ಸುಖ, ಶಾಂತಿ ಹಾಗೂ ನೆಮ್ಮದಿಯನ್ನು ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸಿದ್ದಾರೆ.

**<><><>**

**ಕಾಡುಗೊಲ್ಲ ಸಮುದಾಯವನ್ನು** ಪರಿಶಿ ್ಟ ಪಂಗಡಕ್ಕೆ ಸೇರಿಸುವ ರಾಜ್ಯದ ಪ್ರಸ್ತಾವವನ್ನು, ಮತ್ತಷ್ಟು ವಿವರಗಳೊಂದಿಗೆ ಕೇಂದ್ರಕ್ಕೆ ಮರು ಸಲ್ಲಿಸುವಂತೆ, ಸಮುದಾಯದ ಮುಖಂಡರು ಬೆಂಗಳೂರಿನ ಗೃಹ ಕಚೇರಿ ಕೃ ್ಣದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಿದರು.

**<><><>**

**ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ** ಅಭಿಯಾನದಡಿ, ಮಹಿಳೆಯರು, ರೈತರ ಸಬಲೀಕರಣಕ್ಕಾಗಿ, ಗಮನಾರ್ಹ ಕೆಲಸ ಮಾಡುತ್ತಿರುವ, ರಾಜ್ಯದ 12 ಜನ ಕೃಷಿ ಮತ್ತು ಪಶು ಸಖಿಯರಿಗೆ, ಹೊಸ ದಿಲ್ಲಿಯ ಈ ಬಾರಿಯ ಗಣರಾಜ್ಯೋತ್ಸವದಲ್ಲಿ, ಪಾಲ್ಗೊಳ್ಳಲು ಕೇಂದ್ರ ಸರ್ಕಾರ, ವಿಶೇಷವಾಗಿ ಆಹ್ವಾನಿಸಿದೆ. ಚಿಕ್ಕಬಳ್ಳಾಪುರ ಜಿಲ್ಲೆ ಶಿಡ್ಲಘಟ್ಟ ತಾಲೂಕು ಆನೂರು ಗ್ರಾಮದ, ಕೃಷಿ ಸಖಿ ಲಾವಣ್ಯಾ ಸಹ ಪಾಲ್ಗೊಳ್ಳಲಿದ್ದಾರೆ. ಆನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಂಟು ಗ್ರಾಮಗಳಲ್ಲಿ ಕೃಷಿ ಸಖಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಲಾವಣ್ಯಾ ಪದವಿಧರೆ. 2019 ರಿಂದ ಅವರು ಕೃಷಿ ಸಖಿಯಾಗಿ, ಕಾರ್ಯನಿರ್ವಹಿಸುತ್ತಿದ್ದಾರೆ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

**<><><>**

**ಡಾಕ್ಟರ್ ಬಿ.ಆರ್.ಅಂಬೇಡ್ಕರ್** ವಿರುದ್ಧ ಕೇಂದ್ರ ಗೃಹ ಖಾತೆ ಸಚಿವ ಅಮಿತ್ ಶಾ ನೀಡಿರುವ ಹೇಳಿಕೆ ಖಂಡಿಸಿ ವಿವಿಧ ದಲಿತ ಸಂಘಟನೆಗಳು ನಿನ್ನೆ ಕರೆ ನೀಡಿದ್ದ ಹುಬ್ಬಳ್ಳಿ–ಧಾರವಾಡ ಬಂದ್‌ಗೆ ಹುಬ್ಬಳ್ಳಿಯಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಬೆಳಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಹುಬ್ಬಳ್ಳಿ ನಗರ ಸಂಪೂರ್ಣ ಸ್ತಬ್ಧವಾಗಿತ್ತು. ವಿವಿಧ ಸಂಘಟನೆಗಳು ಬೃಹತ್ ಪ್ರತಿಭಟನೆ ನಡೆಸಿ, ಬಿಜೆಪಿ ಹಾಗೂ ಅಮಿತ್ ಶಾ ಅವರ ವಿರುದ್ಧ

ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಹಿರಂಗವಾಗಿ ಸಾರ್ವಜನಿಕರ ಕ್ಷಮೆ ಕೋರುವಂತೆ ಹಾಗೂ ಕೇಂದ್ರ ಸಂಪುಟದಿಂದ ಅವರನ್ನು ವಜಾಗೊಳಿಸುವಂತೆ ಆಗ್ರಹಿಸಿದರು. ಬಸ್ ಸಂಚಾರ ಸ್ಥಗಿತಗೊಳಿಸಲಾಗಿತ್ತು. ಕೆಲ ವರ್ತಕರು ಅಂಗಡಿಗಳನ್ನು ಬಂದ್ ಮಾಡಿ ಸ್ವಯಂ ಪ್ರೇರಿತವಾಗಿ ಬಂದ್‌ಗೆ ಬೆಂಬಲಿಸಿದರು. ಬಂದ್ ಹಿನ್ನೆಲೆ ಧಾರವಾಡದಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಸಲ್ಲಿಸಿದ ಬಳಿಕ ಅಂಜುಮನ್ ವೃತ್ತ, ವಿವೇಕಾನಂದ ವೃತ್ತ ಸೇರಿದಂತೆ ವಿವಿಧ ಪ್ರಮುಖ ಬೀದಿಗಳಲ್ಲಿ ಪ್ರತಿಭಟನಾಕಾರರು ಸಂಚರಿಸಿದರು. ಕೆಲವು ಅಂಗಡಿಕಾರರು ಸ್ವಯಂ ಪ್ರೇರಿತರಾಗಿ ಅಂಗಡಿ ಬಾಗಿಲು ಮುಚ್ಚಿ ಬೆಂಬಲಿಸಿದರೆ, ಕೆಲವು ಅಂಗಡಿಗಳನ್ನು ಒತ್ತಾಯಪೂರ್ವಕವಾಗಿ ಬಂದ್ ಮಾಡಿಸಲಾಯಿತು. ವೈದ್ಯಕೀಯ ಸೇವೆ, ಔಷಧಿ ಅಂಗಡಿ, ಪೆಟ್ರೋಲ್ ಬಂಕ್, ಹಾಲಿನ ಅಂಗಡಿಗಳು ಎಂದಿನಂತೆ ಕಾರ್ಯ ನಡೆಸಿದ್ದವು.

<><><>

**'ಕ್ಯಾಸನೂರು ಫಾರೆಸ್ಟ್ ಡಿಸೀಸ್'** ಮಂಗನ ಕಾಯಿಲೆ ಕುರಿತು, ಶಿವಮೊಗ್ಗ ಜಿಲ್ಲೆಯ ಎಲ್ಲ ಪಂಚಾಯ್ತಿಗಳಲ್ಲಿ ಅರಿವು ಮೂಡಿಸಲು, ಕ್ರಮ ಕೈಗೊಳ್ಳುವಂತೆ, ತಾಲೂಕು ಆಡಳಿತಗಳಿಗೆ, ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ತಿಳಿಸಿದ್ದಾರೆ. ಜಿಲ್ಲಾಡಳಿತದ ಕಚೇರಿ ಸಭಾಂಗಣದಲ್ಲಿ ಅವರು, ಆರೋಗ್ಯ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ಮಲೆನಾಡಿನ ಭಾಗದಲ್ಲಿ ಜನ ಕಾಡಿಗೆ ಹೋಗುವಾಗ, ಉಣ್ಣೆಗಳಿಂದ ರಕ್ಷಣೆ ಪಡೆಯಲು, ಅಗತ್ಯ ಮುಂಜಾಗ್ರತೆ ವಹಿಸುವಂತೆ, ಸೂಚಿಸಿದರು.ಸಾಗರ, ಸೊರಬ, ತೀರ್ಥಹಳ್ಳಿ ಹಾಗೂ ಹೊಸನಗರ, ಈ ನಾಲ್ಕು ತಾಲೂಕುಗಳಲ್ಲಿ, ಡೇಪಾ ತೈಲ ನೀಡಲಾಗಿದೆ. ಜಾನುವಾರುಗಳಿಗೆ ಲಸಿಕೆ ಕೊಡಿಸುವಂತೆ ಅವರು ಹೇಳಿದರು.**ಕಳೆದ 2024 ರಲ್ಲಿ** 63 ಜನರಲ್ಲಿ ಮಂಗನ ಕಾಯಿಲೆ ಕಂಡು ಬಂದಿದ್ದು, ಓರ್ವರು ಸಾವನ್ನಪ್ಪಿದ ಘಟನೆ ವರದಿಯಾಗಿತ್ತು.

<><><>